## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **601 (741)** |
| ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 18.08.2025 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರ ನಿಗಧಿಪಡಿಸಿದ ಮಾನದಂಡಗಳನ್ವಯ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಸದರಿದೂಗಿಸಲು ನೇಮಿಸಿರುವ ತಾತ್ಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವು) | ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಪ್ರಸಕ್ತ ಸಾಲಿನಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು 34,027 ಅತಿಥಿ ಶಿಕ್ಷಕರಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.<br>ಅಂತೆಯೆ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಬೋಧಕ ವೃಂದದ ಸಹ ಶಿಕ್ಷಕರುಗಳ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ಒಟ್ಟು 9499 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ, ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ) | ಯಾವ ಸಮಿತಿ ಅಥವಾ ಅಧಿಕಾರಿಯ ವರದಿಯ ಆಧಾರದಲ್ಲಿ ಇಷ್ಟು ಮಕ್ಕಳಿಗೆ ಇಷ್ಟು ಶಿಕ್ಷಕರು ಅಂದರೆ 30:1 ಅಥವಾ 40:1 ಎಂದು ಅನುಪಾತವನ್ನು ನಿಗದಿಪಡಿಸಲಾಗಿದೆ; | ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ 2009 ರ ಸೆಕ್ಷನ್ 19 ಮತ್ತು 25 ರ ಪ್ರಕಾರ ಶಾಲೆಗಳನ್ನು ನಡೆಸಲು ವಿಧಿಸಿರುವ ಮಾನದಂಡಗಳಂತೆ ಇರಬೇಕಾದ ಪ್ರಮಾಣಗಳು ಮತ್ತು ನಿಯಮಗಳಂತೆ 1 ರಿಂದ 5 ನೇ ತರಗತಿಗೆ ಮತ್ತು 6 ರಿಂದ 7-8 ನೇ ತರಗತಿಗೆ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವನ್ನು ನಿಗಧಿಪಡಿಸಲಾಗಿರುತ್ತದೆ.<br>ಸರ್ಕಾರಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 69 ಎಲ್‌ಬಿಪಿ 2011 ದಿನಾಂಕ: 01.04.2011 ರ ಆದೇಶದಂತೆ ಸರ್ಕಾರಿ ಪ್ರೌಢಶಾಲೆಗಳಲ್ಲಿ 1 ವಿಭಾಗಕ್ಕೆ 70 ವಿದ್ಯಾರ್ಥಿಗಳಂತೆ ಗುರುತಿಸಿ ಒಟ್ಟು 04 ವಿಭಾಗಗಳವರೆಗೆ 06 ವಿಷಯ ಶಿಕ್ಷಕರನ್ನು ಹಾಗೂ 01 ದೈಹಿಕ ಶಿಕ್ಷಣ ಶಿಕ್ಷಕರನ್ನು ಒದಗಿಸಲಾಗುತ್ತಿದೆ. 05 ಅಥವಾ 05 ಕ್ಕಿಂತ ಹೆಚ್ಚು ವಿಭಾಗಗಳು ಇರುವ ಪ್ರೌಢಶಾಲೆಗಳಿಗೆ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರ ಹುದ್ದೆಗಳಂತೆ ಒದಗಿಸಲಾಗುತ್ತಿದೆ. |
| ಇ) ಬ | ಈ ಅನುಪಾತವನ್ನು ನಿಗಧಿಪಡಿಸುವಾಗ ಸರ್ಕಾರಿ ಶಾಲೆಯಲ್ಲರುವ ಕನ್ನಡ ಮಾಧ್ಯಮ ಹಾಗೂ ಶಾಲಭಿವೃದ್ಧಿ ಸಮಿತಿಯು ತಾವೇ ಅಗತ್ಯ ಮೂಲ ಸೌಕರ್ಯಗಳನ್ನು ಹೊಂದಿಸುವ ಮುಚ್ಚಳಿಕೆಯೊಂದಿಗೆ ಪ್ರಾರಂಭವಾಗಿರುವ ಆಂಗ್ಲ ಮಾಧ್ಯಮ ತರಗತಿಯ ಮಕ್ಕಳ ಸಂಖ್ಯೆಯನ್ನು ಪರಿಗಣಿಸಿ ಶಿಕ್ಷಕರ ಅನುಪಾತವನ್ನು ನಿಗದಿಪಡಿಸಲಾಗಿದೆಯೇ; | ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇರುವ ಕನ್ನಡ ಮಾಧ್ಯಮ ಮತ್ತು ಶಾಲಾ ಅಭಿವೃದ್ಧಿ ಸಮಿತಿಗಳು ತಾವೇ ಅಗತ್ಯ ಮೂಲ ಸೌಕರ್ಯ ಹೊಂದಿಸತಕ್ಕದ್ದು, ಎಂಬ ಮುಚ್ಚಳಿಕೆಯೊಂದಿಗೆ ಪ್ರಾರಂಭವಾಗಿರುವ ಆಂಗ್ಲ ಮಾಧ್ಯಮದ ತರಗತಿಯ ಮಕ್ಕಳ ಸಂಖ್ಯೆಯನ್ನು ಪರಿಗಣಿಸಿ, ಪ್ರಾಥಮಿಕ ಶಾಲಾ ಶಿಕ್ಷಕರ ಅನುಪಾತವನ್ನು ನಿಗದಿಪಡಿಸಲಾಗಿರುವುದಿಲ್ಲ. |

| | | |
|---|---|---|
| | | ಆದಾಗ್ಯೂ ರಾಜ್ಯದಲ್ಲಿ ಏಕರೂಪದ ಮಾನದಂಡಗಳನ್ನು ಅನುಸರಿಸಿ ಆಂಗ್ಲ ಭಾಷೆಯನ್ನು ಒಳಗೊಂಡ ದ್ವಿಭಾಷ ಮಾಧ್ಯಮ ಶಾಲೆಗಳಲ್ಲಿ ಎರಡು ಮಾಧ್ಯಮಗಳ ಒಟ್ಟು ದಾಖಲಾತಿ ಕನಿಷ್ಠ 100 ಇರಬೇಕು ಹಾಗೂ ಎರಡೂ ಮಾಧ್ಯಮಗಳಲ್ಲಿ ದಾಖಲಾತಿ ಇದ್ದು, ಆಂಗ್ಲ ಮಾಧ್ಯಮದಲ್ಲಿ ಕನಿಷ್ಠ 25 ಮಕ್ಕಳು ಇದ್ದಲ್ಲಿ ಕಿರಿಯ / ಹಿರಿಯ ಪ್ರಾಥಮಿಕ ವಿಭಾಗಳಲ್ಲಿ ಪ್ರತ್ಯೇಕವಾಗಿ ಹುದ್ದೆಗಳನ್ನು ಮತ್ತು Post Roster ನಂತೆ ಪರಿಗಣಿಸಿ ನೀಡಲಾಗಿದೆ.<br><br>ಒಂದು ಭಾಷಾ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮವಿರುವ ಪ್ರೌಢಶಾಲೆಗಳಲ್ಲಿ ಕೋರ್ ವಿಷಯಗಳಿಗೆ ಅದೇ ಶಿಕ್ಷಕರು ಎರಡು ಮಾಧ್ಯಮದಲ್ಲಿ ಬೋಧನೆ ಮಾಡಬೇಕು. ಇಂತಹ ಪ್ರೌಢಶಾಲೆಗಳಲ್ಲಿ 06 ವಿಭಾಗಗಳಿದ್ದಲ್ಲಿ 10 ಹುದ್ದೆಗಳನ್ನು ನೀಡಲಾಗುತ್ತಿದೆ. ಇನ್ನು ಹೆಚ್ಚು ವಿಭಾಗಗಳಿದ್ದಲ್ಲಿ ಅನುಬಂಧ-2 ರ ಕೋಷ್ಟಕ (ಅ) ರಂತೆ ಹುದ್ದೆಗಳನ್ನು ಒದಗಿಸಲಾಗುತ್ತಿದೆ. |
| ಈ) | ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು ಯಾವಾಗ ನಿಗದಿಪಡಿಸಲಾಗಿತ್ತು; ಯಾವ (ಕಟ್ ಆಫ್ ಡೇಟ್) ದಿನಾಂಕದ ಅಥವಾ ಅವಧಿಯ ಮಕ್ಕಳ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ನಿಗಧಿಪಡಿಸಲಾಗುತ್ತಿದೆ; | ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 ರ ಸೆಕ್ಷನ್ 4(1) ರಲ್ಲಿ ಈ ಕೆಳಕಂಡಂತೆ ತಿಳಿಸಿದೆ:<br><br>**4. ಶಿಕ್ಷಕರ ಸಮರ್ಪಕ ಮರುಹಂಚಿಕೆ (rationalisation).-** (1) ಪ್ರತಿ ಪರ್ಯಾಯ (alternate) ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು [ಅಥವಾ ಉಪನ್ಯಾಸಕರನ್ನು]', ರಾಜ್ಯ ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ಶಿಷ್ಯ-ಶಿಕ್ಷಕ ಅನುಪಾತದ' [ಅಥವಾ ವಿದ್ಯಾರ್ಥಿ-ಉಪನ್ಯಾಸಕ ಅನುಪಾತದ]' ಆಧಾರದ ಮೇಲೆ ಸಮರ್ಪಕವಾಗಿ ಮರುಹಂಚಿಕೆ ಮಾಡತಕ್ಕದ್ದು.<br><br>ಅದರಂತೆ 2 ವರ್ಷಗಳಿಗೊಮ್ಮೆ ಸಮರ್ಪಕ ಮರು-ಹಂಚಿಕೆ ಪ್ರಕ್ರಿಯೆ ಮಾಡಲಾಗುತ್ತಿದೆ.<br><br>ಈ ಅಧಿನಿಯಮದ ಪ್ರಕಾರ ಪ್ರಸಕ್ತ ಸಾಲಿನಲ್ಲಿ, 2024-25 ನೇ ಸಾಲಿನ ದಿನಾಂಕ: 31.12.2024 ರಲ್ಲಿದ್ದಂತೆ ವಿದ್ಯಾರ್ಥಿಗಳ ದಾಖಲಾತಿ ಅನುಸಾರ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಇರುವ ಹುದ್ದೆಗಳನ್ನು ಹಾಗೂ ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಅವಶ್ಯಕತೆ ಇಲ್ಲದ ಕಡೆಯಿಂದ ತೆಗೆದು ಅವಶ್ಯಕತೆ ಇರುವ ಕಡೆ ಸಮರ್ಪಕ ಮರು-ಹಂಚಿಕೆ ಮಾಡುವ ಸಲುವಾಗಿ ಶಿಕ್ಷಕರ ಹುದ್ದೆಗಳನ್ನು ನಿಗದಿಪಡಿಸಲಾಗುತ್ತಿದೆ. |

| | | |
|---|---|---|
| ಉ) | ಶೈಕ್ಷಣಿಕ ವರ್ಷ 2025 ರ ಶಿಕ್ಷಕರ ಸಂಖ್ಯೆಯನ್ನು 2024 ರ ಮಕ್ಕಳ ಒಟ್ಟು ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ & ಮಕ್ಕಳ ಅನುಪಾತ ನಿಗದಿಪಡಿಸಿರುವ ಔಚಿತ್ಯವೇನು; ಈ ಕಾರಣದಿಂದಾಗಿ ಶಿಕ್ಷಣ ಗುಣಮಟ್ಟ ಕುಸಿಯುತ್ತಿರುವ ಬಗ್ಗೆ ಇಲಾಖೆಯ ಕ್ರಮಗಳೇನು? | ಮೇಲೆ ವಿವರಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 ರ ಅನುಸಾರ ದಿನಾಂಕ: 31.12.2024 ರ ವಿದ್ಯಾರ್ಥಿಗಳ ದಾಖಲಾತಿ ಅನುಸಾರ ಶಿಕ್ಷಕರ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಸದರಿ ಅಂಶದಂತೆ ಪ್ರತಿ ಪರ್ಯಾಯ ವರ್ಷಕ್ಕೊಮ್ಮೆ ಶಿಕ್ಷಕರ ಹುದೆಗಳ ಸಮರ್ಪಕ ಮರುಹಂಚಿಕೆ ಮಾಡುವುದರಿಂದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರನ್ನು ಒದಗಿಸಲು ಸಹಾಯಕವಾಗಿ ಶಿಕ್ಷಣ ಗುಣಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ. |

**ಸಂಖ್ಯೆ: ಇಪಿ 261 ಎಸ್‌ಇಎಸ್ 2025**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಕರ್ನಾಟಕ ಸರ್ಕಾರ

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-01**

ಸಂಖ್ಯೆ: DPI-CPIOC4-1(APHS)/4/2025/E-1787029

ದಿನಾಂಕ:26.05.2025

**ಜ್ಞಾಪನ**

**ವಿಷಯ:** 2025-26ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಖಾಲಿ ಇರುವ ವಿಷಯ ಶಿಕ್ಷಕರ ಹುದ್ದೆಗಳಿಗೆದುರಾಗಿ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಇಪಿ 138 ಎಸ್‌ಇಎಸ್ 2025, ದಿನಾಂಕ: 23.05.2025.
2. ಸರ್ಕಾರದ ಆದೇಶ ಸಂಖ್ಯೆ:ಇಪಿ 137 ಎಸ್‌ಇಎಸ್ 2025, ದಿನಾಂಕ: 15.05.2025.
3. ಸರ್ಕಾರದ ಆದೇಶ ಸಂಖ್ಯೆ ಇಪಿ 14 ಎಸ್ ಇ ಎಸ್ 2022, ದಿನಾಂಕ: 27/04/2022.
4. ಸರ್ಕಾರದ ಆದೇಶ ಸಂಖ್ಯೆ ಇಪಿ 14 ಎಸ್ ಇ ಎಸ್ 2022, ದಿನಾಂಕ:18/06/2022.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ರನ್ವಯ 2025-26ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಖಾಲಿ ಇರುವ ವಿಷಯ ಶಿಕ್ಷಕರ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೇರ ನೇಮಕಾತಿ/ಬಡ್ತಿ/ವರ್ಗಾವಣೆ ಮೂಲಕ ಭರ್ತಿ ಮಾಡುವವರೆಗೆ ಅಥವಾ ಪ್ರಸಕ್ತ ಶೈಕ್ಷಣಿಕ ಸಾಲಿನ ಮಾರ್ಚ್-2026 ರ ಅಂತ್ಯದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಒಟ್ಟು 11000 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲ ನೇಮಕ ಮಾಡಿಕೊಳ್ಳಲು ಸೂಚಿಸಿರುತ್ತಾರೆ.

ಅದರಂತೆ 2025-26ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಪ್ರಸ್ತುತ ಖಾಲಿ ಇರುವ 9499 ವಿಷಯ ಶಿಕ್ಷಕರ ಹುದ್ದೆಗಳಿಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೇರ ನೇಮಕಾತಿ/ಬಡ್ತಿ/ವರ್ಗಾವಣೆ ಮೂಲಕ ಭರ್ತಿ ಮಾಡುವವರೆಗೆ ಅಥವಾ ಪ್ರಸಕ್ತ ಶೈಕ್ಷಣಿಕ ಸಾಲಿನ ಮಾರ್ಚ್-2026 ರ ಅಂತ್ಯದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಒಟ್ಟು 9499 ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಗೌರವಧನದ ಆಧಾರದ ಮೇಲೆ ಈ ಕೂಡಲೇ ನೇಮಕ ಮಾಡಿಕೊಳ್ಳಲು ಉಲ್ಲೇಖ (3) ಮತ್ತು (4) ರಲ್ಲಿರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ. ಸದರಿ ಅತಿಥಿ ಶಿಕ್ಷಕರನ್ನು ದಿನಾಂಕ:01.06.2025 ರಿಂದ ನೇಮಕಾತಿ ಮಾಡಿಕೊಳ್ಳಲು ತಿಳಿಸಿದೆ.

**ಷರತ್ತುಗಳು:-**

1. ಸರ್ಕಾರಿ ಪ್ರೌಢ ಶಾಲೆಗಳಿಗೆ ಶಾಲಾವಾರು/ತಾಲ್ಲೂಕುವಾರು ಖಾಲಿ ಇರುವ ಅಗತ್ಯ ಹುದ್ದೆಗಳಿಗೆ ಮಾತ್ರ ಅತಿಥಿ ಶಿಕ್ಷಕರನ್ನು ತ್ವರಿತವಾಗಿ ನೇಮಕಾತಿ ಮಾಡಲು ತಾಲ್ಲೂಕುವಾರು ಅತಿಥಿ ಶಿಕ್ಷಕರ ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
2. ಅತಿಥಿ ಶಿಕ್ಷಕರ ಆಯ್ಕೆ ಜವಾಬ್ದಾರಿಯನ್ನು ಸಂಬಂಧಿಸಿದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರುಗಳ ಮೂಲಕವೇ ನೇಮಕ ಮಾಡುವುದು.
3. ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳು/ಬೆಂಗಳೂರು ಪಬ್ಲಿಕ್ ಶಾಲೆಗಳು ಹಾಗೂ ಆದರ್ಶ ವಿದ್ಯಾಲಯಗಳಲ್ಲಿ ಖಾಲಿ ಇರುವ ಸಹ ಶಿಕ್ಷಕರ ಹುದ್ದೆಗಳ ಶೇಕಡ 100 ರಷ್ಟು ಅತಿಥಿ ಶಿಕ್ಷಕರನ್ನು ಮೊದಲ ಆದ್ಯತೆ ನೀಡಿ ನೇಮಕ ಮಾಡಿಕೊಳ್ಳಲು ಕ್ರಮವಹಿಸುವುದು.
4. ಸರ್ಕಾರಿ ಪ್ರೌಢ ಶಾಲಾ ಅತಿಥಿ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಕಠಿಣ ವಿಷಯಗಳಾದ ಗಣಿತ, ವಿಜ್ಞಾನ, ಆಂಗ್ಲ ವಿಷಯದ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಆದ್ಯತೆ ನೀಡಲು ತಿಳಿಸಿದೆ. ನಂತರ ಇತರ ವಿಷಯಗಳಿಗೆ ಆದ್ಯತ ನೀಡುವುದು.
5. ಸದರಿ ವಿಷಯಗಳಿಗೆ ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಗೆ ಅತಿಥಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವಂತಿಲ್ಲ.
6. ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡ ಹುದ್ದೆಗೆ ವರ್ಗಾವಣೆ/ನೇಮಕಾತಿ ಮುಖಾಂತರ ಖಾಯಂ ಶಿಕ್ಷಕರು ಸ್ಥಳನಿಯುಕ್ತಿಗೊಂಡಲ್ಲಿ, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಶಿಕ್ಷಕರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ಅದೇ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿಯೇ ವರ್ಗಾವಣೆಯಿಂದ ತೆರವಾದ ಹುದ್ದೆಗೆ ಅತಿಥಿ ಶಿಕ್ಷಕರನ್ನು ಹಂಚಿಕೆ ಮಾಡುವುದು.
7. ಅತಿಥಿ ಶಿಕ್ಷಕರನ್ನು ಅತೀ ಹೆಚ್ಚು ಮಕ್ಕಳಿರುವ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವ ಪ್ರೌಢ ಶಾಲೆಗಳಿಗೆ ಆದ್ಯತ ಮೇರೆಗೆ ಒದಗಿಸುವುದು.
8. ಅತಿಥಿ ಶಿಕ್ಷಕರನ್ನು ಆಯಾ ಹುದ್ದೆಗೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗಧಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸುವುದು ಹಾಗೂ ಅತಿಥಿ ಶಿಕ್ಷಕರ ನೇಮಕಾತಿಗೆ ಸ್ವೀಕೃತವಾದ ಅರ್ಜಿಗಳಲ್ಲಿ ಹೆಚ್ಚು ಮೆರಿಟ್ ಹೊಂದಿರುವ ಅಭ್ಯರ್ಥಿಯನ್ನು ಆಯ್ಕೆ ಮಾಡತಕ್ಕದ್ದು.

9. ಅತಿಥಿ ಶಿಕ್ಷಕರ ಹಾಜರಾತಿ ವಹಿಯನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

10. ಸರ್ಕಾರಿ ಪ್ರೌಢ ಶಾಲಾ ಅತಿಥಿ ಶಿಕ್ಷಕರ ಗೌರವ ಸಂಭಾವನೆ ದರವನ್ನು ಉಲ್ಲೇಖ(2) ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಮಾಹೆಯಾನ ರೂ.12500/- ಆಗಿರುತ್ತದೆ. ಈ ಗೌರವ ಧನ ಪಾವತಿಯನ್ನು ಅತಿಥಿ ಶಿಕ್ಷಕರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಪಾವತಿಸುವುದು.

11. ದಿನಾಂಕ:28.04.2025 ರಂದು ವರ್ಗಾವಣೆ ತಂತ್ರಾಂಶದಲ್ಲಿ ಇರುವ ಒಟ್ಟು 9499 ಖಾಲಿ ಹುದ್ದೆಗಳ ಅನುಸಾರ ತಾಲ್ಲೂಕುವಾರು ಅತಿಥಿ ಶಿಕ್ಷಕರ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಅತಿಥಿ ಶಿಕ್ಷಕರ ಹುದ್ದೆಗಳನ್ನು ತಾಲ್ಲೂಕು ಪಂಚಾಯಿತಿವಾರು ಮರುಹಂಚಿಕೆ ಮಾಡಿ ಅನುದಾನದ ವಿವರಗಳನ್ನು ಈ ಕಛೇರಿಗೆ ಸಲ್ಲಿಸಿದ ನಂತರ ತಾಲ್ಲೂಕಿನಿಂದ ತಾಲ್ಲೂಕಿಗೆ ಅತಿಥಿ ಶಿಕ್ಷಕರ ಮರುಹಂಚಿಕೆ ಮಾಡುವಂತಿಲ್ಲ.

12. ನಿಯೋಜನ ಮೇಲೆ ತೆರವಾದ ಹುದ್ದೆಗಳಿಗೆ ಅತಿಥಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವಂತಿಲ್ಲ.

13. ಇನ್ನೂ ಹೆಚ್ಚಿನ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರ ಅವಶ್ಯಕತೆ ಇದ್ದಲ್ಲಿ ಮಾಹಿತಿಯನ್ನು ಉಪನಿರ್ದೇಶಕರು(ಆಡಳಿತ) ರವರ ಮೂಲಕ ಮಾಹಿತಿಯನ್ನು ಸಲ್ಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ಇಲಾಖೆಯ ನಿಯಮಗಳು ಹಾಗೂ ಸುತ್ತೋಲೆಗಳ ಮಾರ್ಗದರ್ಶನದಡಿ ಉಲ್ಲೇಖ (1) ರಲ್ಲಿ ಒಟ್ಟು 11000 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಸಹಮತಿಯಂತೆ ಉಲ್ಲೇಖ (3) ಮತ್ತು (4) ರ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನೊಳಗೊಂಡಂತೆ 2025-26 ನೇ ಸಾಲಿನಲ್ಲಿ ಮೊದಲ ಹಂತದಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಸ್ತುತ ಖಾಲಿ ಇರುವ ಒಟ್ಟು 9499 ಹುದ್ದೆಗಳಿಗೆ ಜಿಲ್ಲಾವಾರು/ತಾಲ್ಲೂಕುವಾರು ಅತಿಥಿ ಶಿಕ್ಷಕರ ಹುದ್ದೆಗಳನ್ನು ಹಂಚಿಕೆ ಮಾಡಿ ಅನುಮತಿ ನೀಡಿದೆ.

ಮೇಲ್ಕಂಡ ವಿಷಯದಲ್ಲಿ ಯಾವುದೇ ಲೋಪದೋಷಗಳಾಗದಂತೆ ಕ್ರಮವಹಿಸಲು ತಿಳಿಸಿದೆ, ತಪ್ಪಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು. ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಂಡು ತಾಲ್ಲೂಕು ಪಂಚಾಯಿತಿವಾರು ಹುದ್ದೆಗಳ ವಿವರಗಳನ್ನು ಕೆಳಗಿನ ನಮೂನೆಯಲ್ಲಿ ಕ್ರೋಢೀಕೃತ, ದೃಢೀಕೃತ (ಪಿ.ಡಿ.ಎಫ್ ಮಾದರಿಯಲ್ಲಿ) ಸ್ಕ್ಯಾನ್ಡ್ ಪ್ರತಿಯನ್ನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಇ-ಮೇಲ್ ವಿಳಾಸ est4cpibng@gmail.com ಮುಖಾಂತರ ದಿ.20.06.2025ರೊಳಗೆ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಇದನ್ನು ಆದ್ಯತೆ ಮೇರೆಗೆ ಪರಿಗಣಿಸಿ ವಿಳಂಬಕ್ಕೆ ಅವಕಾಶ ನೀಡದಂತೆ ತುರ್ತು ಕ್ರಮ ಜರುಗಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಷರಾ:-
ಜಿಲ್ಲೆಗಳಿಗೆ ತಾಲ್ಲೂಕುವಾರು ಹಂಚಿಕೆ ಮಾಡಿರುವ ಅತಿಥಿ ಶಿಕ್ಷಕರ ವಿವರ ಅನುಬಂಧ-1 ಈ ಪತ್ರದೊಂದಿಗೆ ಲಗತ್ತಿಸಿದೆ.

**ನಮೂನೆ-1**

**(ಪ್ರೌಢ ಶಾಲಾ ಅತಿಥಿ ಶಿಕ್ಷಕರ ನೇಮಕಾತಿ ವಿವರ)**

ಜಿಲ್ಲೆಗೆ ಹಂಚಿಕೆ ಮಾಡಿರುವ ಒಟ್ಟು ಅತಿಥಿ ಶಿಕ್ಷಕರ ಸಂಖ್ಯೆ :

ಜಿಲ್ಲೆಯ ಹೆಸರು :

| ಕ್ರಮ ಸಂಖ್ಯೆ | ಶೈಕ್ಷಣಿಕ ಬ್ಲಾಕ್ ಹೆಸರು | ತಾಲ್ಲೂಕು ಪಂಚಾಯಿತಿ ಹೆಸರು | ಹಂಚಿಕೆ ಮಾಡಲಾದ ಅತಿಥಿ ಶಿಕ್ಷಕರ ಸಂಖ್ಯೆ | ನೇಮಕಗೊಂಡ ಅತಿಥಿ ಶಿಕ್ಷಕರ ಸಂಖ್ಯೆ | ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಗೌರವ ಸಂಭಾವನೆ ಪಾವತಿಸಲು ಅನುದಾನ ಬೇಡಿಕೆ ವಿವರ (ನೇಮಕಾತಿ ದಿನಾಂಕದಿಂದ ಮಾರ್ಚ್-2026 ರವರೆಗೆ, ಪ್ರತಿ ಶಿಕ್ಷಕರಿಗೆ/ ಒಂದು ತಿಂಗಳಿಗೆ ರೂ.12500/-ರಂತೆ, ಗರಿಷ್ಟ 10 ತಿಂಗಳು ಮಾತ್ರ) |
|---|---|---|---|---|---|
| 1 | 2 | 3 | 4 | 5 | 6 |

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

ಗೆ,
ಶಾಲಾ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ(ಆಡಳಿತ) ಇವರಿಗೆ ಅಗತ್ಯ ಹಾಗೂ ತುರ್ತು ಕ್ರಮಕ್ಕಾಗಿ.

ಪ್ರತಿಯನ್ನು:-

1 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.

2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

3. ಅಪರ ಆಯುಕ್ತರು, ಗುಲ್ಬರ್ಗಾ/ಧಾರವಾಡ, ಶಾಲಾ ಶಿಕ್ಷಣ ಇಲಾಖೆ ರವರ ಮಾಹಿತಿ ಹಾಗೂ ಕ್ರಮಕ್ಕಾಗಿ.

4. ಹಿರಿಯ ಸಹಾಯಕ ನಿರ್ದೇಶಕರು(ಇ-ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು.

5. ಕಛೇರಿ ಪ್ರತಿ.

## ನಮೂನೆ-1

ದಿನಾಂಕ:28.04.2025 ರಂದು ವರ್ಗಾವಣೆ ತಂತ್ರಾಂಶದಲ್ಲಿದ್ದಂತೆ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಒಟ್ಟು 9499 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ಜಿಲ್ಲಾವಾರು/ತಾಲ್ಲೂಕುವಾರು ಹಂಚಿಕೆ ಮಾಡಿರುವ ವಿವರ

| SL NO | DISTRICT NAME | BLOCK NAME | PRESENT AM VACANT | GUEST TEACHER POST DISTRIBUTION |
|---|---|---|---|---|
| 1 | BAGALKOT (2902) | BADAMI (290201) | 51 | 51 |
| 2 | BAGALKOT (2902) | BAGALKOT (290202) | 9 | 9 |
| 3 | BAGALKOT (2902) | BILAGI (290206) | 47 | 47 |
| 4 | BAGALKOT (2902) | HUNAGUND (290207) | 40 | 40 |
| 5 | BAGALKOT (2902) | JAMAKHANDI (290209) | 82 | 82 |
| 6 | BAGALKOT (2902) | MUDHOL (290211) | 62 | 62 |
| | TOTAL | | **291** | **291** |
| 7 | BALLARI (2912) | BELLARY EAST (291209) | 78 | 78 |
| 8 | BALLARI (2912) | KURUGODU (291201) | 100 | 100 |
| 9 | BALLARI (2912) | SANDUR (291207) | 96 | 96 |
| 10 | BALLARI (2912) | SIRUGUPPA (291208) | 157 | 157 |
| | TOTAL | | **431** | **431** |
| 11 | BELAGAVI (2901) | BAILHONGAL (290102) | 27 | 27 |
| 12 | BELAGAVI (2901) | BELGAUM CITY (290103) | 7 | 7 |
| 13 | BELAGAVI (2901) | BELGAUM RURAL. (290104) | 15 | 15 |
| 14 | BELAGAVI (2901) | KHANAPUR (290108) | 33 | 33 |
| 15 | BELAGAVI (2901) | KITTUR (290113) | 20 | 20 |
| 16 | BELAGAVI (2901) | RAMDURG (290111) | 67 | 67 |
| 17 | BELAGAVI (2901) | SOUNDATTI (290112) | 108 | 108 |
| | TOTAL | | **277** | **277** |
| 18 | BELAGAVI CHIKKODI (2930) | ATHANI (293001) | 67 | 67 |
| 19 | BELAGAVI CHIKKODI (2930) | CHIKODI (293005) | 60 | 60 |
| 20 | BELAGAVI CHIKKODI (2930) | GOKAK (293006) | 34 | 34 |
| 21 | BELAGAVI CHIKKODI (2930) | HUKKERI (293007) | 101 | 101 |
| 22 | BELAGAVI CHIKKODI (2930) | KAGWAD (293013) | 9 | 9 |
| 23 | BELAGAVI CHIKKODI (2930) | MUDALGI (293014) | 129 | 129 |
| 24 | BELAGAVI CHIKKODI (2930) | NIPPANI (293009) | 23 | 23 |
| 25 | BELAGAVI CHIKKODI (2930) | RAIBAG (293010) | 79 | 79 |
| | TOTAL | | **502** | **502** |
| 26 | BENGALURU RURAL (2921) | DEVANAHALLI (292103) | 40 | 40 |
| 27 | BENGALURU RURAL (2921) | DODDABALLAPURA (292102) | 46 | 46 |
| 28 | BENGALURU RURAL (2921) | HOSAKOTE (292104) | 60 | 60 |
| 29 | BENGALURU RURAL (2921) | NELAMANGALA (292101) | 24 | 24 |
| | TOTAL | | **170** | **170** |
| 30 | BENGALURU U NORTH (2928) | NORTH1 (292802) | 16 | 16 |
| 31 | BENGALURU U NORTH (2928) | NORTH2 (292805) | 3 | 3 |
| 32 | BENGALURU U NORTH (2928) | NORTH3 (292806) | 12 | 12 |
| 33 | BENGALURU U NORTH (2928) | NORTH4 (292807) | 21 | 21 |
| | TOTAL | | **52** | **52** |

| | | | | |
|---|---|---|---|---|
| 34 | BENGALURU U SOUTH (2920) | ANEKAL (292004) | 30 | 30 |
| 35 | BENGALURU U SOUTH (2920) | SOUTH1 (292001) | 27 | 27 |
| 36 | BENGALURU U SOUTH (2920) | SOUTH2 (292008) | 8 | 8 |
| 37 | BENGALURU U SOUTH (2920) | SOUTH3 (292009) | 26 | 26 |
| 38 | BENGALURU U SOUTH (2920) | SOUTH4 (292003) | 37 | 37 |
| | **TOTAL** | | **128** | **128** |
| 39 | BIDAR (2905) | AURAD (290501) | 73 | 73 |
| 40 | BIDAR (2905) | BASAVAKALYAN (290502) | 86 | 86 |
| 41 | BIDAR (2905) | BHALKI (290503) | 59 | 59 |
| 42 | BIDAR (2905) | BIDAR (290504) | 26 | 26 |
| 43 | BIDAR (2905) | HUMNABAD (290505) | 86 | 86 |
| | **TOTAL** | | **330** | **330** |
| 44 | CHAMARAJANAGARA (2927) | CHAMARAJA NAGAR (292701) | 63 | 63 |
| 45 | CHAMARAJANAGARA (2927) | GUNDULPET (292702) | 42 | 42 |
| 46 | CHAMARAJANAGARA (2927) | HANUR (292713) | 39 | 39 |
| 47 | CHAMARAJANAGARA (2927) | KOLLEGAL (292705) | 19 | 19 |
| 48 | CHAMARAJANAGARA (2927) | YELANDUR (292712) | 15 | 15 |
| | **TOTAL** | | **178** | **178** |
| 49 | CHIKKABALLAPURA (2929) | BAGEPALLY (292901) | 43 | 43 |
| 50 | CHIKKABALLAPURA (2929) | CHIKKABALLAPUR (292903) | 25 | 25 |
| 51 | CHIKKABALLAPURA (2929) | CHINTAMANI (292904) | 53 | 53 |
| 52 | CHIKKABALLAPURA (2929) | GOWRIBIDANUR (292905) | 63 | 63 |
| 53 | CHIKKABALLAPURA (2929) | GUDIBANDA (292906) | 38 | 38 |
| 54 | CHIKKABALLAPURA (2929) | SIDLAGHATTA (292911) | 40 | 40 |
| | **TOTAL** | | **262** | **262** |
| 55 | CHIKKAMANGALURU (2917) | BIRURU (291708) | 12 | 12 |
| 56 | CHIKKAMANGALURU (2917) | CHIKMAGALUR (291706) | 9 | 9 |
| 57 | CHIKKAMANGALURU (2917) | KADUR (291705) | 12 | 12 |
| 58 | CHIKKAMANGALURU (2917) | KOPPA (291702) | 41 | 41 |
| 59 | CHIKKAMANGALURU (2917) | MOODIGERE (291707) | 50 | 50 |
| 60 | CHIKKAMANGALURU (2917) | NARASIMHARAJAPURA (291703) | 29 | 29 |
| 61 | CHIKKAMANGALURU (2917) | SRINGERI (291701) | 16 | 16 |
| 62 | CHIKKAMANGALURU (2917) | TARIKERE (291704) | 20 | 20 |
| | **TOTAL** | | **189** | **189** |
| 63 | CHITRADURGA (2913) | CHALLAKERE (291302) | 43 | 43 |
| 64 | CHITRADURGA (2913) | CHITRADURGA (291301) | 8 | 8 |
| 65 | CHITRADURGA (2913) | HIRIYUR (291303) | 21 | 21 |
| 66 | CHITRADURGA (2913) | HOLALKERE (291304) | 5 | 5 |
| 67 | CHITRADURGA (2913) | HOSADURGA (291305) | 8 | 8 |
| 68 | CHITRADURGA (2913) | MOLAKALMUR (291306) | 33 | 33 |
| | **TOTAL** | | **118** | **118** |
| 69 | DAKSHINA KANNADA (2924) | BANTWAL (292401) | 81 | 81 |
| 70 | DAKSHINA KANNADA (2924) | BELTHANGADY (292402) | 64 | 64 |
| 71 | DAKSHINA KANNADA (2924) | MANGALURU NORTH (292403) | 35 | 35 |

| | | | | |
|---|---|---|---|---|
| 72 | DAKSHINA KANNADA (2924) | MANGALURU SOUTH (292406) | 36 | 36 |
| 73 | DAKSHINA KANNADA (2924) | MOODABIDRE (292407) | 15 | 15 |
| 74 | DAKSHINA KANNADA (2924) | PUTTUR (292404) | 45 | 45 |
| 75 | DAKSHINA KANNADA (2924) | SULLIA (292405) | 40 | 40 |
| | **TOTAL** | | **316** | **316** |
| 76 | DAVANAGERE (2914) | CHANNAGIRI (291401) | 38 | 38 |
| 77 | DAVANAGERE (2914) | DAVANAGERE(N) (291402) | 5 | 5 |
| 78 | DAVANAGERE (2914) | DAVANAGERE(S) (291403) | 12 | 12 |
| 79 | DAVANAGERE (2914) | HARIHARA (291404) | 3 | 3 |
| 80 | DAVANAGERE (2914) | HONNALI (291405) | 29 | 29 |
| 81 | DAVANAGERE (2914) | JAGALUR (291406) | 17 | 17 |
| | **TOTAL** | | **104** | **104** |
| 82 | DHARWAD (2909) | DHARWAD (290901) | 12 | 12 |
| 83 | DHARWAD (2909) | DHARWAD CITY (290907) | 1 | 1 |
| 84 | DHARWAD (2909) | HUBLI (290902) | 13 | 13 |
| 85 | DHARWAD (2909) | KALGHATAGI (290903) | 34 | 34 |
| 86 | DHARWAD (2909) | KUNDAGOL (290904) | 33 | 33 |
| 87 | DHARWAD (2909) | NAVALGUND (290905) | 31 | 31 |
| | **TOTAL** | | **124** | **124** |
| 88 | GADAG (2908) | GADAG CITY (290801) | 2 | 2 |
| 89 | GADAG (2908) | GADAG RURAL (290806) | 18 | 18 |
| 90 | GADAG (2908) | MUNDARAGI (290802) | 39 | 39 |
| 91 | GADAG (2908) | NARAGUND (290803) | 48 | 48 |
| 92 | GADAG (2908) | RON (290804) | 76 | 76 |
| 93 | GADAG (2908) | SHIRHATTI (290805) | 50 | 50 |
| | **TOTAL** | | **233** | **233** |
| 94 | HASSAN (2923) | ALUR (292301) | 34 | 34 |
| 95 | HASSAN (2923) | ARAKALAGUDU (292302) | 83 | 83 |
| 96 | HASSAN (2923) | ARASIKERE (292303) | 38 | 38 |
| 97 | HASSAN (2923) | BELUR (292304) | 29 | 29 |
| 98 | HASSAN (2923) | CHANNARAYAPATNA (292305) | 84 | 84 |
| 99 | HASSAN (2923) | HASSAN (292307) | 16 | 16 |
| 100 | HASSAN (2923) | HOLENARASIPURA (292306) | 94 | 94 |
| 101 | HASSAN (2923) | SAKALESHAPURA (292308) | 57 | 57 |
| | **TOTAL** | | **435** | **435** |
| 102 | HAVERI (2911) | BYADAGI (291101) | 23 | 23 |
| 103 | HAVERI (2911) | HANAGAL (291105) | 55 | 55 |
| 104 | HAVERI (2911) | HAVERI (291106) | 26 | 26 |
| 105 | HAVERI (2911) | HIREKERUR (291107) | 13 | 13 |
| 106 | HAVERI (2911) | RANNEBENNUR (291114) | 12 | 12 |
| 107 | HAVERI (2911) | SAVANUR (291116) | 56 | 56 |
| 108 | HAVERI (2911) | SHIGGOAN (291117) | 52 | 52 |
| | **TOTAL** | | **237** | **237** |
| 109 | KALBURGI (2904) | AFZALPUR (290402) | 44 | 44 |

| | | | | |
|---|---|---|---|---|
| 110 | KALBURGI (2904) | ALAND (290401) | 75 | 75 |
| 111 | KALBURGI (2904) | CHINCHOLI (290403) | 87 | 87 |
| 112 | KALBURGI (2904) | CHITTAPUR (290404) | 72 | 72 |
| 113 | KALBURGI (2904) | GULBARGA NORTH (290411) | 13 | 13 |
| 114 | KALBURGI (2904) | GULBARGA SOUTH (290405) | 12 | 12 |
| 115 | KALBURGI (2904) | JEWARGI (290406) | 78 | 78 |
| 116 | KALBURGI (2904) | SEDAM (290409) | 74 | 74 |
| | **TOTAL** | | **455** | **455** |
| 117 | KODAGU (2925) | MADIKERI (292501) | 31 | 31 |
| 118 | KODAGU (2925) | SOMAVARPET (292502) | 47 | 47 |
| 119 | KODAGU (2925) | VIRAJPET (292503) | 31 | 31 |
| | **TOTAL** | | **109** | **109** |
| 120 | KOLAR (2919) | BANGARAPETE (291902) | 54 | 54 |
| 121 | KOLAR (2919) | K G F (291913) | 37 | 37 |
| 122 | KOLAR (2919) | KOLAR (291907) | 49 | 49 |
| 123 | KOLAR (2919) | MALUR (291909) | 50 | 50 |
| 124 | KOLAR (2919) | MULBAGAL (291910) | 53 | 53 |
| 125 | KOLAR (2919) | SRINIVASAPUR (291912) | 80 | 80 |
| | **TOTAL** | | **323** | **323** |
| 126 | KOPPAL (2907) | GANGAVATHI (290702) | 179 | 179 |
| 127 | KOPPAL (2907) | KOPPAL (290703) | 66 | 66 |
| 128 | KOPPAL (2907) | KUSTAGI (290704) | 97 | 97 |
| 129 | KOPPAL (2907) | YELBURGA (290709) | 136 | 136 |
| | **TOTAL** | | **478** | **478** |
| 130 | MANDYA (2922) | KRISHNARAJA PET (292201) | 88 | 88 |
| 131 | MANDYA (2922) | MADDUR (292202) | 85 | 85 |
| 132 | MANDYA (2922) | MALAVALLY (292203) | 96 | 96 |
| 133 | MANDYA (2922) | MANDYA NORTH (292208) | 23 | 23 |
| 134 | MANDYA (2922) | MANDYA SOUTH (292204) | 11 | 11 |
| 135 | MANDYA (2922) | NAGAMANGALA (292205) | 58 | 58 |
| 136 | MANDYA (2922) | PANDAVAPURA (292206) | 47 | 47 |
| 137 | MANDYA (2922) | SRIRANGA PATNA (292207) | 6 | 6 |
| | **TOTAL** | | **414** | **414** |
| 138 | MYSURU (2926) | H.D.KOTE (292603) | 70 | 70 |
| 139 | MYSURU (2926) | HUNSUR (292604) | 42 | 42 |
| 140 | MYSURU (2926) | K.R.NAGARA (292606) | 64 | 64 |
| 141 | MYSURU (2926) | MYSORE NORTH (292607) | 2 | 2 |
| 142 | MYSURU (2926) | MYSORE RURAL (292608) | 6 | 6 |
| 143 | MYSURU (2926) | MYSORE SOUTH (292612) | 1 | 1 |
| 144 | MYSURU (2926) | NANJANAGUD (292609) | 7 | 7 |
| 145 | MYSURU (2926) | PERIYA PATNA (292610) | 74 | 74 |
| 146 | MYSURU (2926) | T.N.PURA (292611) | 22 | 22 |
| | **TOTAL** | | **288** | **288** |
| 147 | RAICHUR (2906) | DEVADURGA (290601) | 181 | 181 |

| | | | | |
|---|---|---|---|---|
| 148 | RAICHUR (2906) | *LINGASUGUR (290605)* | 130 | 130 |
| 149 | RAICHUR (2906) | MANVI (290606) | 205 | 205 |
| 150 | RAICHUR (2906) | RAICHUR (290607) | 173 | 173 |
| 151 | RAICHUR (2906) | SINDHANUR (290608) | 174 | 174 |
| | TOTAL | | **863** | **863** |
| 152 | RAMANAGARA (2932) | CHANNAPATNA (293207) | 64 | 64 |
| 153 | RAMANAGARA (2932) | KANAKAPURA (293208) | 83 | 83 |
| 154 | RAMANAGARA (2932) | MAGADI (293205) | 39 | 39 |
| 155 | RAMANAGARA (2932) | RAMANAGARA (293206) | 38 | 38 |
| | TOTAL | | **224** | **224** |
| 156 | SHIVAMOGGA (2915) | BHADRAVATI (291501) | 16 | 16 |
| 157 | SHIVAMOGGA (2915) | HOSANAGAR (291502) | 28 | 28 |
| 158 | SHIVAMOGGA (2915) | SAGAR (291503) | 21 | 21 |
| 159 | SHIVAMOGGA (2915) | SHIKARIPUR (291504) | 27 | 27 |
| 160 | SHIVAMOGGA (2915) | SHIMOGA (291505) | 6 | 6 |
| 161 | SHIVAMOGGA (2915) | SORAB (291506) | 49 | 49 |
| 162 | SHIVAMOGGA (2915) | THIRTHAHALLI (291507) | 43 | 43 |
| | TOTAL | | **190** | **190** |
| 163 | TUMAKURU (2918) | CHIKNAYAKANHALLI (291801) | 44 | 44 |
| 164 | TUMAKURU (2918) | GUBBI (291802) | 42 | 42 |
| 165 | TUMAKURU (2918) | KUNIGAL (291810) | 79 | 79 |
| 166 | TUMAKURU (2918) | TIPTUR (291808) | 31 | 31 |
| 167 | TUMAKURU (2918) | TUMKUR (291809) | 9 | 9 |
| 168 | TUMAKURU (2918) | TURUVEKERE (291807) | 45 | 45 |
| | TOTAL | | **250** | **250** |
| 169 | TUMAKURU MADHUGIRI (2931) | KORATAGERE (293103) | 25 | 25 |
| 170 | TUMAKURU MADHUGIRI (2931) | MADHUGIRI (293104) | 52 | 52 |
| 171 | TUMAKURU MADHUGIRI (2931) | PAVAGADA (293105) | 65 | 65 |
| 172 | TUMAKURU MADHUGIRI (2931) | SIRA (293106) | 61 | 61 |
| | TOTAL | | **203** | **203** |
| 173 | UDUPI (2916) | BRAHAMAVARA (291605) | 20 | 20 |
| 174 | UDUPI (2916) | BYNDOOR (291604) | 23 | 23 |
| 175 | UDUPI (2916) | KARKALA (291601) | 53 | 53 |
| 176 | UDUPI (2916) | KUNDAPURA (291603) | 34 | 34 |
| 177 | UDUPI (2916) | UDUPI (291602) | 46 | 46 |
| | TOTAL | | **176** | **176** |
| 178 | UTTARA KANNADA (2910) | ANKOLA (291001) | 10 | 10 |
| 179 | UTTARA KANNADA (2910) | BHATKAL (291009) | 7 | 7 |
| 180 | UTTARA KANNADA (2910) | HONNAVAR (291008) | 5 | 5 |
| 181 | UTTARA KANNADA (2910) | KARWAR (291002) | 6 | 6 |
| 182 | UTTARA KANNADA (2910) | KUMTA (291005) | 6 | 6 |
| | TOTAL | | **34** | **34** |
| 183 | UTTARA KANNADA SIRSI (2934) | HALIYAL (293404) | 39 | 39 |
| 184 | UTTARA KANNADA SIRSI (2934) | JOIDA (293411) | 39 | 39 |

| | | | | |
|---|---|---|---|---|
| 185 | UTTARA KANNADA SIRSI (2934) | MUNDAGOD (293410) | 24 | 24 |
| 186 | UTTARA KANNADA SIRSI (2934) | SIDDAPUR (293406) | 16 | 16 |
| 187 | UTTARA KANNADA SIRSI (2934) | SIRSI (293403) | 11 | 11 |
| 188 | UTTARA KANNADA SIRSI (2934) | YELLAPUR (293407) | 22 | 22 |
| | **TOTAL** | | **151** | **151** |
| 189 | VIJAYANAGARA (2935) | HADAGALI (291202) | 43 | 43 |
| 190 | VIJAYANAGARA (2935) | HAGARIBOMMANAHALLI (291203) | 25 | 25 |
| 191 | VIJAYANAGARA (2935) | HARAPANAHALLI (291407) | 26 | 26 |
| 192 | VIJAYANAGARA (2935) | HOSPET (291205) | 33 | 33 |
| 193 | VIJAYANAGARA (2935) | KUDLIGI (291206) | 51 | 51 |
| | **TOTAL** | | **178** | **178** |
| 194 | VIJAYAPURA (2903) | BASAVAN BAGEWADI (290303) | 26 | 26 |
| 195 | VIJAYAPURA (2903) | BIJAPUR CITY (290314) | 1 | 1 |
| 196 | VIJAYAPURA (2903) | BIJAPUR RURAL (290305) | 19 | 19 |
| 197 | VIJAYAPURA (2903) | CHADACHAN (290313) | 29 | 29 |
| 198 | VIJAYAPURA (2903) | INDI (290308) | 36 | 36 |
| 199 | VIJAYAPURA (2903) | MUDDEBIHAL (290310) | 20 | 20 |
| 200 | VIJAYAPURA (2903) | SINDAGI (290312) | 52 | 52 |
| | **TOTAL** | | **183** | **183** |
| 201 | YADAGIRI (2933) | SHAHAPUR (293307) | 187 | 187 |
| 202 | YADAGIRI (2933) | SHORAPUR (293308) | 248 | 248 |
| 203 | YADAGIRI (2933) | YADGIR (293310) | 168 | 168 |
| | **TOTAL** | | **603** | **603** |
| | **GRAND TOTAL** | | **9499** | **9499** |

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

# ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾದ, ಕಾರ್ಯನಿರತ ಹಾಗೂ ಖಾಲಿಯಿರುವ ಶಿಕ್ಷಕರ ಹುದ್ದೆಗಳ ವಿವರ

| SL NO | DISTRICT NAME | PCM | | | ARTS | | | CBZ | | | LAN | | | ENG | | | HINDI | | | PET | | | SPL | | | TOTAL | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT |
| 1 | BAGALKOT | 321 | 315 | 6 | 270 | 198 | 72 | 215 | 166 | 49 | 258 | 194 | 64 | 225 | 186 | 39 | 195 | 134 | 61 | 207 | 191 | 16 | 109 | 97 | 12 | 1800 | 1481 | 319 |
| 2 | BALLARI | 207 | 194 | 13 | 176 | 71 | 105 | 145 | 84 | 61 | 170 | 78 | 92 | 153 | 58 | 95 | 137 | 72 | 65 | 141 | 43 | 98 | 41 | 29 | 12 | 1170 | 629 | 541 |
| 3 | BELAGAVI | 232 | 210 | 22 | 189 | 129 | 60 | 155 | 117 | 38 | 182 | 91 | 91 | 158 | 128 | 30 | 140 | 104 | 36 | 148 | 123 | 25 | 83 | 82 | 1 | 1287 | 984 | 303 |
| 4 | BELAGAVI CHIKKODI | 350 | 325 | 25 | 301 | 144 | 157 | 228 | 149 | 79 | 283 | 154 | 129 | 231 | 146 | 85 | 198 | 171 | 27 | 212 | 165 | 47 | 116 | 115 | 1 | 1919 | 1369 | 550 |
| 5 | BENGALURU RURAL | 119 | 118 | 1 | 100 | 43 | 57 | 76 | 71 | 5 | 95 | 49 | 46 | 81 | 47 | 34 | 74 | 47 | 27 | 74 | 35 | 39 | 38 | 33 | 5 | 657 | 443 | 214 |
| 6 | BENGALURU U NORTH | 125 | 125 | 0 | 106 | 83 | 23 | 74 | 69 | 5 | 108 | 99 | 9 | 82 | 70 | 12 | 69 | 66 | 3 | 71 | 61 | 10 | 46 | 46 | 0 | 681 | 619 | 62 |
| 7 | BENGALURU U SOUTH | 185 | 179 | 6 | 163 | 114 | 49 | 109 | 106 | 3 | 147 | 105 | 42 | 120 | 99 | 21 | 102 | 95 | 7 | 102 | 75 | 27 | 64 | 61 | 3 | 992 | 834 | 158 |
| 8 | BIDAR | 240 | 234 | 6 | 216 | 146 | 70 | 212 | 155 | 57 | 259 | 153 | 106 | 181 | 108 | 73 | 141 | 123 | 18 | 175 | 111 | 64 | 96 | 89 | 7 | 1520 | 1119 | 401 |
| 9 | CHAMARAJANAGARA | 127 | 126 | 1 | 107 | 74 | 33 | 92 | 60 | 32 | 103 | 74 | 29 | 98 | 57 | 41 | 91 | 49 | 42 | 91 | 59 | 32 | 21 | 11 | 10 | 730 | 510 | 220 |
| 10 | CHIKKABALLAPURA | 159 | 152 | 7 | 139 | 71 | 68 | 122 | 81 | 41 | 142 | 84 | 58 | 127 | 70 | 57 | 119 | 88 | 31 | 119 | 55 | 64 | 43 | 34 | 9 | 970 | 635 | 335 |
| 11 | CHIKKAMANGALURU | 181 | 177 | 4 | 167 | 94 | 73 | 127 | 102 | 25 | 148 | 107 | 41 | 131 | 109 | 22 | 125 | 101 | 24 | 121 | 73 | 48 | 51 | 47 | 4 | 1051 | 810 | 241 |
| 12 | CHITRADURGA | 173 | 169 | 4 | 149 | 117 | 32 | 127 | 116 | 11 | 148 | 107 | 41 | 130 | 115 | 15 | 122 | 107 | 15 | 125 | 88 | 37 | 57 | 52 | 5 | 1031 | 871 | 160 |
| 13 | DAKSHINA KANNADA | 237 | 226 | 11 | 208 | 147 | 61 | 183 | 177 | 6 | 193 | 110 | 83 | 187 | 120 | 67 | 181 | 93 | 88 | 176 | 130 | 46 | 45 | 40 | 5 | 1410 | 1043 | 367 |
| 14 | DAVANAGERE | 225 | 215 | 10 | 187 | 164 | 23 | 154 | 154 | 0 | 195 | 156 | 39 | 156 | 135 | 21 | 141 | 130 | 11 | 145 | 105 | 40 | 82 | 72 | 10 | 1285 | 1131 | 154 |
| 15 | DHARWAD | 174 | 172 | 2 | 145 | 112 | 33 | 120 | 119 | 1 | 141 | 93 | 48 | 126 | 101 | 25 | 110 | 95 | 15 | 116 | 96 | 20 | 74 | 69 | 5 | 1006 | 857 | 149 |
| 16 | GADAG | 162 | 157 | 5 | 141 | 86 | 55 | 123 | 91 | 32 | 134 | 82 | 52 | 125 | 83 | 42 | 116 | 69 | 47 | 119 | 78 | 41 | 55 | 52 | 3 | 975 | 698 | 277 |
| 17 | HASSAN | 321 | 315 | 6 | 306 | 169 | 137 | 248 | 184 | 64 | 276 | 188 | 88 | 250 | 183 | 67 | 247 | 174 | 73 | 247 | 112 | 135 | 104 | 92 | 12 | 1999 | 1417 | 582 |
| 18 | HAVERI | 205 | 205 | 0 | 185 | 132 | 53 | 160 | 127 | 33 | 193 | 124 | 69 | 163 | 135 | 28 | 134 | 80 | 54 | 159 | 107 | 52 | 71 | 60 | 11 | 1270 | 970 | 300 |
| 19 | KALBURGI | 410 | 374 | 36 | 358 | 256 | 102 | 323 | 239 | 84 | 363 | 263 | 100 | 321 | 230 | 91 | 286 | 244 | 42 | 311 | 224 | 87 | 135 | 118 | 17 | 2507 | 1948 | 559 |
| 20 | KODAGU | 60 | 59 | 1 | 56 | 35 | 21 | 48 | 26 | 22 | 51 | 27 | 24 | 50 | 35 | 15 | 48 | 22 | 26 | 48 | 35 | 13 | 9 | 5 | 4 | 370 | 244 | 126 |
| 21 | KOLAR | 201 | 193 | 8 | 173 | 97 | 76 | 141 | 101 | 40 | 180 | 95 | 85 | 149 | 98 | 51 | 138 | 75 | 63 | 137 | 59 | 78 | 47 | 33 | 14 | 1166 | 751 | 415 |
| 22 | KOPPAL | 309 | 271 | 38 | 260 | 162 | 98 | 205 | 147 | 58 | 240 | 126 | 114 | 214 | 124 | 90 | 196 | 116 | 80 | 200 | 122 | 78 | 64 | 54 | 10 | 1688 | 1122 | 566 |
| 23 | MANDYA | 271 | 265 | 6 | 252 | 173 | 79 | 227 | 142 | 85 | 250 | 161 | 89 | 231 | 159 | 72 | 227 | 144 | 83 | 221 | 120 | 101 | 104 | 85 | 19 | 1783 | 1249 | 534 |
| 24 | MYSURU | 356 | 352 | 4 | 310 | 240 | 70 | 253 | 218 | 35 | 291 | 229 | 62 | 263 | 198 | 65 | 252 | 200 | 52 | 246 | 208 | 38 | 105 | 94 | 11 | 2076 | 1739 | 337 |
| 25 | RAICHUR | 407 | 299 | 108 | 336 | 152 | 184 | 270 | 140 | 130 | 318 | 170 | 148 | 287 | 136 | 151 | 255 | 113 | 142 | 252 | 113 | 139 | 114 | 90 | 24 | 2239 | 1213 | 1026 |
| 26 | RAMANAGARA | 144 | 141 | 3 | 133 | 73 | 60 | 111 | 89 | 22 | 135 | 69 | 66 | 116 | 82 | 34 | 106 | 67 | 39 | 110 | 58 | 52 | 33 | 25 | 8 | 888 | 604 | 284 |
| 27 | SHIVAMOGGA | 268 | 260 | 8 | 239 | 193 | 46 | 187 | 179 | 8 | 238 | 191 | 47 | 195 | 143 | 52 | 165 | 136 | 29 | 177 | 135 | 42 | 73 | 58 | 15 | 1542 | 1295 | 247 |
| 28 | TUMAKURU | 204 | 199 | 5 | 186 | 119 | 67 | 147 | 120 | 27 | 187 | 129 | 58 | 157 | 111 | 46 | 143 | 96 | 47 | 145 | 78 | 67 | 76 | 73 | 3 | 1245 | 925 | 320 |
| 29 | TUMAKURU MADHUGIRI | 141 | 135 | 6 | 127 | 80 | 47 | 105 | 81 | 24 | 123 | 73 | 50 | 110 | 76 | 34 | 103 | 61 | 42 | 102 | 49 | 53 | 53 | 48 | 5 | 864 | 603 | 261 |
| 30 | UDUPI | 194 | 185 | 9 | 174 | 125 | 49 | 121 | 114 | 7 | 139 | 102 | 37 | 126 | 104 | 22 | 121 | 69 | 52 | 116 | 95 | 21 | 62 | 39 | 23 | 1053 | 833 | 220 |
| 31 | UTTARA KANNADA | 66 | 62 | 4 | 61 | 55 | 6 | 53 | 50 | 3 | 65 | 59 | 6 | 52 | 39 | 13 | 47 | 45 | 2 | 52 | 47 | 5 | 20 | 18 | 2 | 416 | 375 | 41 |
| 32 | UTTARA KANNADA SIRSI | 121 | 118 | 3 | 106 | 66 | 40 | 86 | 74 | 12 | 107 | 62 | 45 | 87 | 54 | 33 | 76 | 58 | 18 | 82 | 53 | 29 | 31 | 26 | 5 | 696 | 511 | 185 |
| 33 | VIJAYANAGARA | 217 | 210 | 7 | 179 | 103 | 76 | 147 | 138 | 9 | 167 | 142 | 25 | 151 | 124 | 27 | 140 | 106 | 34 | 140 | 121 | 19 | 45 | 36 | 9 | 1186 | 980 | 206 |
| 34 | VIJAYAPURA | 265 | 259 | 6 | 225 | 151 | 74 | 183 | 160 | 23 | 218 | 178 | 40 | 187 | 176 | 11 | 163 | 134 | 29 | 174 | 147 | 27 | 84 | 74 | 10 | 1499 | 1279 | 220 |
| 35 | YADAGIRI | 270 | 171 | 99 | 229 | 111 | 118 | 166 | 74 | 92 | 206 | 108 | 98 | 177 | 68 | 109 | 152 | 65 | 87 | 159 | 83 | 76 | 76 | 49 | 27 | 1435 | 729 | 706 |
| | TOTAL | 7647 | 7167 | 480 | 6659 | 4285 | 2374 | 5443 | 4220 | 1223 | 6453 | 4232 | 2221 | 5597 | 3907 | 1690 | 5060 | 3549 | 1511 | 5220 | 3454 | 1766 | 2327 | 2006 | 321 | 44406 | 32820 | 11586 |

DIRECTOR(SECONDARY EDUCATION)

ಪ್ರಾಥಮಿಕ ಶಿಕ್ಷಕರು

## Teacher Transfer (2024-2025)

## Department of School Education - Karnataka

### As on Date : 04-08-2025 05:55 PM

| SR. NO. | DISTRICT | SRHM | HM | GPT | PST | PE | SPL | NST |
|---|---|---|---|---|---|---|---|---|
| 1 | BAGALKOT ( 2902 ) | 127 | 583 | 2048 | 3625 | 307 | 10 | 13 |
| 2 | BALLARI ( 2912 ) | 130 | 234 | 1281 | 2426 | 225 | 24 | 1 |
| 3 | BELAGAVI ( 2901 ) | 176 | 513 | 2090 | 4730 | 352 | 25 | 25 |
| 4 | BELAGAVI CHIKKODI ( 2930 ) | 179 | 714 | 2724 | 5140 | 398 | 30 | 19 |
| 5 | BENGALURU RURAL ( 2921 ) | 19 | 150 | 868 | 2026 | 50 | 4 | 4 |
| 6 | BENGALURU U NORTH ( 2928 ) | 93 | 130 | 1013 | 2149 | 140 | 33 | 3 |
| 7 | BENGALURU U SOUTH ( 2920 ) | 144 | 242 | 1559 | 3288 | 230 | 36 | 6 |
| 8 | BIDAR ( 2905 ) | 42 | 461 | 1514 | 3150 | 285 | 15 | 1 |
| 9 | CHAMARAJANAGARA ( 2927 ) | 17 | 209 | 799 | 1543 | 103 | 4 | 12 |
| 10 | CHIKKABALLAPURA ( 2929 ) | 11 | 185 | 1009 | 2514 | 57 | 4 | 7 |
| 11 | CHIKKAMANGALURU ( 2917 ) | 12 | 176 | 1044 | 2392 | 169 | 11 | 13 |
| 12 | CHITRADURGA ( 2913 ) | 33 | 506 | 1675 | 3392 | 158 | 7 | 23 |
| 13 | DAKSHINA KANNADA ( 2924 ) | 49 | 361 | 1417 | 2469 | 190 | 13 | 4 |
| 14 | DAVANAGERE ( 2914 ) | 29 | 373 | 1234 | 2501 | 150 | 8 | 7 |
| 15 | DHARWAD ( 2909 ) | 111 | 397 | 1438 | 2807 | 272 | 13 | 4 |
| 16 | GADAG ( 2908 ) | 65 | 316 | 984 | 1976 | 178 | 11 | 1 |
| 17 | HASSAN ( 2923 ) | 10 | 171 | 1511 | 3651 | 69 | 8 | 34 |
| 18 | HAVERI ( 2911 ) | 80 | 547 | 1641 | 3492 | 234 | 7 | 2 |
| 19 | KALBURGI ( 2904 ) | 175 | 654 | 2505 | 5057 | 357 | 25 | 17 |
| 20 | KODAGU ( 2925 ) | 6 | 80 | 405 | 696 | 60 | 3 | 3 |
| 21 | KOLAR ( 2919 ) | 19 | 196 | 1209 | 3265 | 58 | 3 | 14 |
| 22 | KOPPAL ( 2907 ) | 177 | 368 | 1784 | 3528 | 341 | 31 | 21 |
| 23 | MANDYA ( 2922 ) | 10 | 228 | 1368 | 2634 | 102 | 11 | 52 |
| 24 | MYSURU ( 2926 ) | 36 | 497 | 1965 | 3736 | 188 | 18 | 15 |
| 25 | RAICHUR ( 2906 ) | 228 | 507 | 2233 | 4932 | 432 | 22 | 26 |
| 26 | RAMANAGARA ( 2932 ) | 14 | 138 | 835 | 2080 | 52 | 6 | 7 |
| 27 | SHIVAMOGGA ( 2915 ) | 18 | 430 | 1747 | 3643 | 127 | 18 | 5 |
| 28 | TUMAKURU ( 2918 ) | 22 | 226 | 1419 | 3655 | 95 | 4 | 1 |
| 29 | TUMAKURU MADHUGIRI ( 2931 ) | 8 | 238 | 996 | 2256 | 58 | 4 | 0 |
| 30 | UDUPI ( 2916 ) | 25 | 190 | 809 | 1471 | 144 | 6 | 1 |
| 31 | UTTARA KANNADA ( 2910 ) | 8 | 169 | 855 | 1840 | 119 | 3 | 1 |
| 32 | UTTARA KANNADA SIRSI ( 2934 ) | 29 | 203 | 1019 | 2344 | 74 | 5 | 0 |
| 33 | VIJAYANAGARA ( 2935 ) | 115 | 392 | 1480 | 2839 | 244 | 11 | 3 |
| 34 | VIJAYAPURA ( 2903 ) | 204 | 721 | 2616 | 5577 | 472 | 23 | 23 |
| 35 | YADAGIRI ( 2933 ) | 158 | 279 | 1438 | 3400 | 282 | 25 | 3 |
| 36 | TOTAL | 2579 | 11784 | 50532 | 106224 | 6772 | 481 | 371 |

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ:ಸಿ4(1)ಸ ಪ್ರೌ.ಶಾ.ಹೆ.ಶಿ. **47/2021-22** ದಿನಾಂಕ: **13.04.2022**

:ಪರಿಷ್ಕೃತ ಜ್ಞಾಪನ:

ವಿಷಯ: 2022-23ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅವಶ್ಯಕ/ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಅಧೀಕೃತ ಜ್ಞಾಪನ ಪತ್ರ ಸಮ ಸಂಖ್ಯೆ: ದಿನಾಂಕ: 29.03.2022

2)ಈ ಕಛೇರಿ ಸುತ್ತೋಲೆ ದಿನಾಂಕ: 02.03.2012ರ ತಿದ್ದುಪಡಿ ಆದೇಶ ದಿನಾಂಕ: 10.08.2012

******

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆ ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಸಿಬ್ಬಂದಿ ಸ್ತರ ವಿನ್ಯಾಸ [Staff Pattern]ಕ್ಕೆ ಅನುಗುಣವಾಗಿ ಶಿಕ್ಷಕರನ್ನು ಒದಗಿಸಬೇಕಾಗಿರುತ್ತದೆ. ಇದರನ್ವಯ ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಹೆಚ್ಚುವರಿ ಪ್ರಕ್ರಿಯೆ ಮೂಲಕ ಸಮರ್ಪಕವಾಗಿ ಹುದ್ದೆಗಳನ್ನು ಹಂಚಿಕೆ ಮಾಡಿ ಸರಿದೂಗಿಸಲು ಉಲ್ಲೇಖ(1)ರ ಅಧೀಕೃತ ಜ್ಞಾಪನದನ್ವಯ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖಿತ(1)ರ ಅಧೀಕೃತ ಜ್ಞಾಪನದ ಅಂಶಗಳೂ ಸೇರಿದಂತೆ ಮುಂದುವರೆದ ಭಾಗವಾಗಿ ಉಲ್ಲೇಖ(2)ರಂತೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ:

- 4 ವಿಭಾಗಗಳವರೆಗಿನ ಪ್ರೌಢ ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸದ ಪ್ರಕಾರ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಹುದ್ದೆಗಳಿರಬೇಕು: ಕನ್ನಡ ಭಾಷೆ-1, ಹಿಂದಿ-1, ಆಂಗ್ಲ ಭಾಷೆ-1, ಕಲಾ-1, ಗಣಿತ (ಪಿ.ಸಿ.ಎಂ)-1, ವಿಜ್ಞಾನ (ಸಿ.ಬಿ.ಝಡ್)-1, ದೈಹಿಕ ಶಿಕ್ಷಣ ಶಿಕ್ಷಕರ (ಗ್ರೇಡ್-1) ಹುದ್ದೆ-1 ನಿಗದಿಪಡಿಸುವುದು.
- 5 ಅಥವಾ 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರಂತೆ ಒದಗಿಸಲು ಅವಕಾಶವಿದೆ. ಅವಶ್ಯಕವಿರುವ/ಹೆಚ್ಚುವರಿ ಹುದ್ದೆಗಳನ್ನು ಈ ಕೆಳಕಂಡ ಕೋಷ್ಟಕ(ಅ)ದಲ್ಲಿ ನೀಡಲಾಗಿರುವಂತೆ ಗುರುತಿಸುವುದು.

ಕೋಷ್ಟಕ (ಅ)

| ವಿಭಾಗಗಳ ಸಂಖ್ಯೆ | ಗಣಿತ/ ವಿಜ್ಞಾನ (ಪಿ.ಸಿ.ಎಂ) | ವಿಜ್ಞಾನ (ಸಿ.ಬಿ.ಜೆಡ್) | ಕಲಾ | ಆಂಗ್ಲ | ಕನ್ನಡ ಭಾಷೆ | ಹಿಂದಿ ಭಾಷೆ | ದೈ.ಶಿ.ಶಿ ಗ್ರೇಡ್-1 | ವಿ.ಶಿ.ಶಿ | ಒಟ್ಟು |
|---|---|---|---|---|---|---|---|---|---|
| 4 ರವರಗೆ | 1 | 1 | 1 | 1 | 1 | 1 | 1 | 0 | 7 |
| 5 | 2 | 1 | 1 | 1 | 1 | 1 | 1 | 0 | 8 |
| 6 | 2 | 1 | 2 | 1 | 1 | 1 | 1 | 1 | 10 |
| 7 | 2 | 1 | 2 | 1 | 2 | 1 | 1 | 1 | 11 |
| 8 | 3 | 1 | 2 | 2 | 2 | 1 | 1 | 1 | 13 |
| 9 | 3 | 2 | 2 | 2 | 2 | 2 | 1 | 1 | 15 |
| 10 | 3 | 2 | 2 | 2 | 2 | 2 | 2 | 1 | 16 |
| 11 | 3 | 2 | 3 | 2 | 2 | 2 | 2 | 1 | 17 |
| 12 | 4 | 2 | 3 | 2 | 3 | 2 | 2 | 1 | 19 |
| 13 | 4 | 2 | 3 | 2 | 3 | 2 | 2 | 2 | 20 |
| 14 | 4 | 2 | 3 | 3 | 3 | 2 | 2 | 2 | 21 |
| 15 | 5 | 2 | 4 | 3 | 3 | 2 | 2 | 2 | 23 |

ಸಂಸ್ಕೃತ ಪ್ರಥಮ ಅಥವಾ ತೃತೀಯ ಭಾಷೆ ಇರುವ ಶಾಲೆಗಳಲ್ಲಿ, ಸಂಸ್ಕೃತ ಭಾಷೆ ಕಲಿಯುವ ಮಕ್ಕಳ ಸಂಖ್ಯೆ ಇದ್ದಲ್ಲಿ, ಇತರ ಭಾಷಾ ಶಿಕ್ಷಕರ ಹುದ್ದೆಯ ಜೊತೆಗೆ ಸಂಸ್ಕೃತ ಭಾಷಾ ಶಿಕ್ಷಕರ ಹುದ್ದೆ ಇರತಕ್ಕದ್ದು. ಈ ರೀತಿ ಹುದ್ದೆಗಳನ್ನು ಮಂಜೂರು ಮಾಡಿದ್ದಲ್ಲಿ ಮೇಲ್ಕಂಡ ಕೋಷ್ಟಕದ ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಸೇರ್ಪಡೆಯಾಗತಕ್ಕದ್ದು (ಸಂಸ್ಕೃತ ಭಾಷೆ ಇರುವ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ. ಕೋಷ್ಟಕದಲ್ಲಿ ಒಟ್ಟು ಕಾಲಂನಲ್ಲಿ ಸೇರ್ಪಡೆಯಾಗಿರುವುದಿಲ್ಲ. (ಮೇಲ್ಕಂಡ ಕೋಷ್ಟಕವು ಸಾಮಾನ್ಯವಾಗಿ ಎಲ್ಲಾ ಶಾಲೆಗಳಿಗೆ ಅನ್ವಯಿಸುತ್ತದೆ)

- ವಿಶೇಷ ಶಿಕ್ಷಕರ ಹುದ್ದೆಗಳನ್ನು ಪ್ರಸ್ತುತ ಸರ್ಕಾರ ನಿಗದಿಪಡಿಸಿರುವ ಸಿಬ್ಬಂದಿ ಮಾದರಿ ರಚನೆಯಂತೆ ಆ ಶಾಲೆಯ ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ನಿಗದಿಪಡಿಸಬಹುದಾಗಿದೆ. ಹುದ್ದೆ ಹೆಚ್ಚುವರಿಯಾದಲ್ಲಿ ಅಂತಹ ಹುದ್ದೆಯನ್ನು ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ಅದ್ಯತೆ ಮೇರೆಗೆ ಅವಶ್ಯಕತೆ ಇರುವ ಶಾಲೆಗೆ ನಿಗದಿಪಡಿಸಲಾಗಿದೆ.
- ಒಂದು ವೇಳೆ ಈ ಮೇಲಿನ ಅಂಶದಂತೆ ಹೆಚ್ಚುವರಿಯಾಗುವ ವಿಶೇಷ ಶಿಕ್ಷಕರ ಹುದ್ದೆಯಲ್ಲಿ ಈಗಾಗಲೇ ವಿಶೇಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹ ಹುದ್ದೆಯನ್ನು ಅದೇ ಜಿಲ್ಲೆಯಲ್ಲಿರುವ ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ಗರಿಷ್ಠ ಸಂಖ್ಯೆಯಿಂದ ಪ್ರಾರಂಭಿಸಿ ಇಳಿಕೆ ಕ್ರಮದಲ್ಲಿ ಅದ್ಯತೆ ಮೇರೆಗೆ ಅವಶ್ಯಕತೆ ಇರುವ ಶಾಲೆಗೆ ಸ್ಥಳಾಂತರಿಸಲಾಗುವುದು.
- ಹುದ್ದೆ ಸಹಿತ ಹೆಚ್ಚುವರಿ ಆದ ಶಿಕ್ಷಕರನ್ನು ಜಿಲ್ಲೆಯೊಳಗೆ ಮಾತ್ರ ಸ್ಥಳಾಂತರಿಸಲಾಗುವುದು. ಒಂದು ವೇಳೆ ಹೆಚ್ಚುವರಿ ಶಿಕ್ಷಕರು ಬಯಸಿದ್ದಲ್ಲಿ ಜಿಲ್ಲೆಯ ಹೊರಗೆ ಸ್ಥಳಾಂತರಿಸಲಾಗುವುದು.
- ಕರ್ನಾಟಕ ಪಬ್ಲಿಕ್ ಶಾಲೆಗಳು ಹಾಗೂ ಉನ್ನತೀಕರಿಸಿದ ಆರ್.ಎಂ.ಎಸ್.ಎ ಶಾಲೆಗಳಲ್ಲಿನ 9-10ನೇ ತರಗತಿ ದಾಖಲಾತಿಯನ್ನು ಪ್ರೌಢ ಶಾಲೆಗಳಿಗೆ ಪರಿಗಣಿಸುವುದು.
- ಕರ್ನಾಟಕ ಪಬ್ಲಿಕ್ ಶಾಲೆಗಳು ಹಾಗೂ ಉನ್ನತೀಕರಿಸಿದ ಆರ್.ಎಂ.ಎಸ್.ಎ ಶಾಲೆಗಳಲ್ಲಿನ 8ನೇ ತರಗತಿ ದಾಖಲಾತಿಯನ್ನು ಪ್ರಾಥಮಿಕ ಶಾಲಾ ದಾಖಲಾತಿಗೆ ಸೇರಿಸಿ ನಿಯಮಾನುಸಾರ ಹುದ್ದೆಗಳ ನಿಗದಿಯನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)ರವರ ವಿಭಾಗದಿಂದ ಆದೇಶ ಹೊರಡಿಸುವುದು.
- ಶಾಲಾ ಮುಖ್ಯ ಶಿಕ್ಷಕರು ಶಾಲೆಯಲ್ಲಿನ ಕಾರ್ಯಭಾರಕ್ಕನುಗುಣವಾಗಿ ಬೋಧನಾ ಅವಧಿಗಳನ್ನು ಹಂಚಿಕೆ ಮಾಡುವುದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ನಿರ್ದೇಶಕರು(ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು. ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಿಕ್ಷಣ ವಾರ್ತೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ ಇವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
5. ನಿರ್ದೇಶಕರು, ಆರ್.ಎಂ.ಎಸ್.ಎ, ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು
6. ಅಪರ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ
8. ಸಹನಿರ್ದೇಶಕರು (ಗುಣಮಟ್ಟ)ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
9. ಕಛೇರಿ ಪ್ರತಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 17.03.2011 ರಂದು ನಡೆದ ಸಭಾ ನಿರ್ಣಯ.

2) ನಿರ್ದೇಶಕರು (ಪ್ರೌಢಶಿಕ್ಷಣ), ಸಾ.ಶಿ.ಇ., ಬೆಂಗಳೂರು. ಇವರ ಪತ್ರ ಸಂಖ್ಯೆ: ಸಿ4(7)ಪ್ರೌಶಿಹೆಶಿಸ್ಥ 01/2008–09; ದಿ:18.03.2011.

*********

ಪ್ರಸ್ತಾವನೆ :

ಸರ್ಕಾರಿ ಪ್ರೌಢಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆ ಸಾಧಿಸುವ ಸಲುವಾಗಿ ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕೆ ಅನುಗುಣವಾಗಿ ಶಿಕ್ಷಕರನ್ನು ಒದಗಿಸಬೇಕಾಗಿದೆ. ಸರ್ಕಾರಿ ಪ್ರೌಢಶಾಲೆಗಳ ಸಿಬ್ಬಂದಿ ಸ್ತರ ವಿನ್ಯಾಸ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಮುಖ್ಯೋಪಾಧ್ಯಾಯರು | – | 1 |
| ಸಹ ಶಿಕ್ಷಕರು | – | 7 |
| ದ್ವಿತೀಯ ದರ್ಜೆ ಸಹಾಯಕರು | – | 1 |
| ಗ್ರೂಪ್–ಡಿ | – | 1 |
| ಒಟ್ಟು | – | 10 |

ಈ ಹಿನ್ನೆಲೆಯಲ್ಲಿ ಕೆಲವು ಸರ್ಕಾರಿ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸಕ್ಕಿಂತ ಹೆಚ್ಚಾಗಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯ ಶಾಲೆಗಳಿಗೆ ಸ್ಥಳ ನಿಯುಕ್ತಿ ಮಾಡಬೇಕಾಗಿದೆ. ಈ ರೀತಿ ಗುರುತಿಸಿದ ಹೆಚ್ಚುವರಿ ಶಿಕ್ಷಕರನ್ನು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯ ಶಾಲೆಗಳಿಗೆ ಸ್ಥಳಾಂತರಿಸಲು ಅನುಮತಿ ನೀಡಲು ಕೋರಿ ಉಲ್ಲೇಖ (2)ರಲ್ಲಿ ನಿರ್ದೇಶಕರು (ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಖಾಲಿ ಹುದ್ದೆಗಳು ಮತ್ತು ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಸ್ಥಳಾಂತರ ಪ್ರಕ್ರಿಯೆ ನಡೆಸಲು ನಿರ್ದಿಷ್ಟ ಮಾನದಂಡ ನಿಗಧಿಪಡಿಸಲು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ, ಈ ಕೆಳಕಾಣಿಸಿದ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ 69 ಎಲ್‌ಬಿಪಿ 2011 ಬೆಂಗಳೂರು, ದಿನಾಂಕ :01–04–2011**

ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ಹೆಚ್ಚುವರಿ ಶಿಕ್ಷಕರು ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಅಗತ್ಯ ಶಾಲೆಗಳಿಗೆ ಜಿಲ್ಲೆಯೊಳಗೆ ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ)ರವರು ಈ ಕೆಳಕಂಡ ನಿಯಮಗಳನ್ನು ಪಾಲಿಸಿ ಸ್ಥಳಾಂತರಿಸಲು ಅನುಮತಿ ನೀಡಿದೆ.

1. **ಹೆಚ್ಚುವರಿ ಹುದ್ದೆ/ಶಿಕ್ಷಕರಿರುವ ಶಾಲೆಗಳನ್ನು ಗುರುತಿಸುವ ಕ್ರಮ:**

- ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸ [Staff Pattern] ಕ್ಕಿಂತ ಹೆಚ್ಚಾಗಿರುವವರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವುದು. ಈ ರೀತಿ ಗುರುತಿಸುವಾಗ ಶಾಲೆಯಲ್ಲಿ ಅತೀ ಹೆಚ್ಚಿನ ಕಾಲಾವಧಿಗೆ ಹುದ್ದೆಯನ್ನು ಧಾರಣೆ ಮಾಡಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸಬೇಕು.
- ವಿಷಯವಾರು ಶಿಕ್ಷಕರನ್ನು ಗಣನೆಗೆ ತೆಗೆದುಕೊಂಡು ನಿರ್ದಿಷ್ಟ ವಿಷಯದಲ್ಲಿ ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸಬೇಕು.
- ಪ್ರತಿ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿ ಕೆಳಗಿನಂತೆ ವಿಭಾಗಗಳನ್ನು ಗುರುತಿಸಬೇಕು.

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಪರಿಗಣಿಸಬೇಕಾದ ವಿಭಾಗ |
|---|---|---|
| 1 | 70 ರವರೆಗೆ | 1 ವಿಭಾಗ |
| 2 | 71-140 | 2 ವಿಭಾಗ |
| 3 | 141-210 | 3 ವಿಭಾಗ |
| 4 | 211-280 | 4 ವಿಭಾಗ |
| 5 | 281-350 | 5 ವಿಭಾಗ |

- ಹೆಚ್ಚುವರಿ ವಿಭಾಗಗಳು ಮಂಜೂರಾಗಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನಿಗದಿತ ಪ್ರಮಾಣಕ್ಕಿಂತ ಕಡಿಮೆಯಾಗಿರುವಲ್ಲಿ ಮೇಲಿನಂತೆ ವಿದ್ಯಾರ್ಥಿ ಸಂಖ್ಯೆಗನುಗುಣವಾಗಿ ವಿಭಾಗಗಳನ್ನು ಗುರುತಿಸುವುದು. ಸಿಬ್ಬಂದಿ ಸ್ಥರ ವಿನ್ಯಾಸದ ಪ್ರಕಾರ ಅಗತ್ಯ ಶಿಕ್ಷಕರನ್ನು ಉಳಿಸಿಕೊಂಡು, ಹೆಚ್ಚುವರಿಯಾದ ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಹುದ್ದೆ ಸಹಿತ ಸ್ಥಳಾಂತರಿಸುವುದು.
- 3 ರಿಂದ 5 ವಿಭಾಗವಿರುವ ಪ್ರೌಢಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸದ ಪ್ರಕಾರ ಮುಖ್ಯಶಿಕ್ಷಕರನ್ನು ಹೊರತುಪಡಿಸಿ 7 ಶಿಕ್ಷಕರಿರಬೇಕು. ಪ್ರಥಮ ಭಾಷೆ-1, ಹಿಂದಿ-1, ಆಂಗ್ಲಭಾಷೆ-1, ಕಲಾ-1, ವಿಜ್ಞಾನ (ಪಿ.ಸಿ.ಎಂ) – 1, ವಿಜ್ಞಾನ(ಸಿ.ಬಿ.ಝಡ್) – 1, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1- 1.
- ಮೇಲ್ಕಂಡ ಸ್ತರ ವಿನ್ಯಾಸದ ಶಿಕ್ಷಕರ ಜೊತೆಗೆ ಸಂಸ್ಕೃತ, ಉರ್ದು, ತೆಲುಗು, ತಮಿಳು, ಮರಾಠಿ ಶಿಕ್ಷಕರನ್ನು ಹಾಗೂ ಭಾಷಾ ಅಲ್ಪಸಂಖ್ಯಾತ ಮಾಧ್ಯಮವಿರುವ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಿದ್ದಲ್ಲಿ ಅವರನ್ನು ಹೆಚ್ಚುವರಿ ಶಿಕ್ಷಕರು ಎಂದು ಗುರುತಿಸುವಂತಿಲ್ಲ.

- ಆಂಗ್ಲ ಭಾಷಾ ಶಿಕ್ಷಕರ ಹುದ್ದೆ ಮಂಜೂರು ಮಾಡಿದ್ದಲ್ಲಿ ಅಥವಾ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 326 ಎಲ್.ಬಿ.ಪಿ 2010, ದಿನಾಂಕ: 04.12.2010ರ ಪ್ರಕಾರ ಒಂದಕ್ಕಿಂತ ಹೆಚ್ಚಿನ ಕಲಾ ಶಿಕ್ಷಕರಿದ್ದಲ್ಲಿ ಅಂತಹ ಕಡೆ ಒಂದು ಕಲಾ ಶಿಕ್ಷಕರ ಹುದ್ದೆಯನ್ನು ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಿದ್ದಲ್ಲಿ ಆ ಹುದ್ದೆಯನ್ನು ಹೆಚ್ಚುವರಿ ಎಂದು ಗುರುತಿಸಬಾರದು.
- 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1 1\2 ಶಿಕ್ಷಕರಂತೆ ಲೆಕ್ಕಾಚಾರ ಮಾಡಿ ಅಗತ್ಯ ಶಿಕ್ಷಕರನ್ನು ಉಳಿಸಿಕೊಂಡು, ಹೆಚ್ಚುವರಿಯಾದ ಹುದ್ದೆ/ಶಿಕ್ಷಕರನ್ನು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಪ್ರೌಢಶಾಲೆಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷ ಶಿಕ್ಷಕರುಗಳಿದ್ದಲ್ಲಿ (ವೃತ್ತಿ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ) ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಶಿಕ್ಷಕರನ್ನು ಉಳಿಸಿಕೊಂಡು, ಉಳಿದ ಶಿಕ್ಷಕರನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಡಾ॥ವೈದ್ಯನಾಥನ್ ಸಮಿತಿಯನ್ವಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ತಾಲ್ಲೂಕುಗಳಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾಗಿರುವ ಗ್ರೇಡ್--1 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಯನ್ನು ಹೆಚ್ಚುವರಿ ಶಿಕ್ಷಕರೆಂದು ಗುರುತಿಸುವಂತಿಲ್ಲ. ಇಂತಹ ಶಾಲೆಗಳಲ್ಲಿ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಸೇವೆಯಲ್ಲಿ ಮುಂದುವರೆಯಬೇಕು.

2. <u>ಹೆಚ್ಚುವರಿ ಹುದ್ದೆ/ಶಿಕ್ಷಕರನ್ನು ಸ್ಥಳಾಂತರಿಸುವ ಕ್ರಮ:</u>

- ಹೆಚ್ಚುವರಿ ಖಾಲಿ ಹುದ್ದೆ/ಶಿಕ್ಷಕರಿರುವ ಶಾಲೆಗಳ ಪಟ್ಟಿ ತಯಾರಿಸುವುದು.
- ಶಿಕ್ಷಕರ ಅಗತ್ಯವಿರುವ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸುವುದು.
- ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಮತ್ತು ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಪ್ರಕಟಿಸುವುದು. ಈ ಪ್ರಕಟಣೆ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.
- ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿಗೆ ಆಕ್ಷೇಪಣೆ ನೀಡಲು ಐದು ದಿನ ಅವಕಾಶ ನೀಡುವುದು.
- ಶಿಕ್ಷಕರಿಂದ ಆಕ್ಷೇಪಣೆ ಸ್ವೀಕರಿಸಿದ ನಂತರ ಲೋಪದೋಷಗಳಿದ್ದಲ್ಲಿ, ಸರಿಪಡಿಸಿ ಅಂತಿಮವಾಗಿ ಹೆಚ್ಚುವರಿ ಹುದ್ದೆ/ಶಿಕ್ಷಕರ ಪಟ್ಟಿ ಪ್ರಕಟಿಸುವುದು.
- ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಹೆಚ್ಚುವರಿಯಾಗಿರುವ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು. ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವಾಗ ಹೆಚ್ಚುವರಿಯಾಗಿರುವ ವಿಷಯಗಳ ಶಿಕ್ಷಕರಲ್ಲಿ ಕಿರಿಯ ಶಿಕ್ಷಕರಿಗೆ ವಿನಾಯಿತಿ ನೀಡಲಾಗಿದೆ.

1. ಶೇಕಡಾ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಶಿಕ್ಷಕರು

2. ಮಾಜಿ ಸೈನಿಕರ ಪತ್ನಿಯಾಗಿರುವ ಶಿಕ್ಷಕರು

3. ವಿಧವಾ ಶಿಕ್ಷಕರು

4. ತೀವ್ರತರ ಖಾಯಿಲೆ ಇರುವ ಶಿಕ್ಷಕರು

5. ನಿವೃತ್ತಿಯಾಗಲು ಎರಡು ವರ್ಷಗಳಿಗಿಂತ ಕಡಿಮೆ ಸೇವಾವಧಿ ಉಳಿದಿರುವ ಶಿಕ್ಷಕರು.

6. ಪ್ರೌಢಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು, ಉಪಾಧ್ಯಕ್ಷರು, ಖಜಾಂಚಿ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ – (ಒಟ್ಟಾರೆ ಸೇವಾವಧಿಯಲ್ಲಿ ಎರಡು ಅವಧಿಗೆ ಮಾತ್ರ ಸೀಮಿತಗೊಂಡು.)

7. ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾಗಿದ್ದಲ್ಲಿ ಡಿಪಿಎಆರ್‌ನಿಂದ ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿ ಪ್ರಕಾರ ವಿನಾಯಿತಿಯಿರುವ ಶಿಕ್ಷಕರು.

ಹೆಚ್ಚುವರಿಯಾಗಿರುವ ವಿಷಯದಲ್ಲಿ ಪೂರ್ಣವಾಗಿ ಮೇಲ್ಕಂಡ ಶಿಕ್ಷಕರೇ ಇದ್ದಾಗ, ವಿನಾಯಿತಿ ಅನ್ವಯಿಸುವುದಿಲ್ಲ. ಇವರಲ್ಲಿ ಹಿರಿಯ ಶಿಕ್ಷಕರನ್ನು ಹೆಚ್ಚುವರಿಯೆಂದು ಗುರುತಿಸಿ ಸ್ಥಳಾಂತರಿಸುವುದು.

- ಕೌನ್ಸಿಲಿಂಗ್ ಮೂಲಕ ಸ್ಥಳಾಂತರಕ್ಕೆ ಮೊದಲು ಹೆಚ್ಚುವರಿ ಶಿಕ್ಷಕರ ಆದ್ಯತಾಪಟ್ಟಿ ಸಿದ್ದಪಡಿಸುವುದು. ಆದ್ಯತಾಪಟ್ಟಿಯಲ್ಲಿ ಕೆಳಗಿನಂತೆ ಆದ್ಯತೆ ನಿಗದಿಪಡಿಸುವುದು.

  ಎ) ವಿನಾಯಿತಿ ಪಟ್ಟಿಯಲ್ಲಿರುವ ಶಿಕ್ಷಕರು (ವಿನಾಯಿತಿಗೆ ಅವಕಾಶ ಇಲ್ಲದಿದ್ದಾಗ)
  ಬಿ) ಪತಿಪತ್ನಿ ಪ್ರಕರಣಗಳಲ್ಲಿನ ಮಹಿಳಾ ಶಿಕ್ಷಕರು
  ಸಿ) ಪತಿಪತ್ನಿ ಪ್ರಕರಣಗಳಲ್ಲಿನ ಪುರುಷ ಶಿಕ್ಷಕರು
  ಡಿ) ಇತರೆ ಮಹಿಳಾ ಶಿಕ್ಷಕರು
  ಇ) ಇತರೆ ಪುರುಷ ಶಿಕ್ಷಕರು

- ಆದ್ಯತಾ ಪಟ್ಟಿಯ ಅನುಸಾರ ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು.

- ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಕೌನ್ಸಿಲಿಂಗ್ ಮುಗಿದ ಮಾರನೇ ದಿನವೇ ನೊಂದಾಯಿತ ಅಂಚೆ (ಸ್ವೀಕೃತಿಯೊಂದಿಗೆ) ಮೂಲಕ ಆದೇಶವನ್ನು ಸಂಬಂಧಿಸಿದ ಶಿಕ್ಷಕರಿಗೆ ಕಳುಹಿಸುವುದು.

ಮೇಲೆ ತಿಳಿಸಿರುವಂತೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಸ್ಥಳಾಂತರಿಸುವ ಎಲ್ಲಾ ಪ್ರಕ್ರಿಯೆಯನ್ನು ಸಾಮಾನ್ಯ ವರ್ಗಾವಣಾ ಪ್ರಕ್ರಿಯೆಯ ಪೂರ್ವದಲ್ಲಿ ಪೂರ್ಣಗೊಳಿಸಲು ಸೂಚಿಸಿದೆ. ಹೆಚ್ಚುವರಿ ಶಿಕ್ಷಕರ ಮತ್ತು ಹೆಚ್ಚುವರಿ ಖಾಲಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಕಾರ್ಯದಲ್ಲಿ ಯಾವುದೇ ಲೋಪ ಆದಲ್ಲಿ

ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಉಪನಿರ್ದೇಶಕರು (ಆಡಳಿತ), ಇವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಮುಂದಿನ ಆದೇಶದವರೆಗೂ ಇದೊಂದು ನಿರಂತರ ಪ್ರಕ್ರಿಯೆಯೆಂದು ಭಾವಿಸಿ ಪ್ರತಿ ವರ್ಷವೂ ನಿಗಧಿಯಾದ ಅವಧಿಯಲ್ಲಿ ಕ್ರಮಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಟಿ. ಜಯರಾಂ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
(ಶಿಕ್ಷಣ ಇಲಾಖೆ)

ಗೆ

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ – ಮುಂದಿನ ಕ್ರಮಕ್ಕಾಗಿ.
3. ನಿರ್ದೇಶಕರು (ಪ್ರಾಥಮಿಕ/ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು/ಧಾರವಾಡ/ಗುಲ್ಬರ್ಗಾ.
4. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ.
5. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ. (ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮುಖಾಂತರ)
6. ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1

ಸಿ4(7) ಪ್ರೌ.ಶಿ.ಹೆ.ಸ್ಥ.01/2008–09

ದಿನಾಂಕ: 01/04/2011

**ಜ್ಞಾಪನ**

ಸರ್ಕಾರಿ ಆದೇಶದ ಸಂಖ್ಯೆ: ಇಡಿ 69 ಎಲ್.ಬಿ.ಪಿ.2011, ದಿನಾಂಕ: 01/04/2011 ರ ಯಥಾ ಪ್ರತಿಯನ್ನು ರವಾನಿಸುತ್ತಾ, ಸದರಿ ಆದೇಶದಲ್ಲಿ ಸೂಚಿಸಿರುವಂತೆ ಕ್ರಮಕೈಗೊಳ್ಳಲು ತಿಳಿಸಿದೆ.

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ:

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ ಧಾರವಾಡ, ಇವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
4. ಕಛೇರಿ ಪ್ರತಿ.